7

# ದಾವೀದ

## ದೈವಭಕ್ತ ಹೃದಯದ ಒಂದು ಮಿಣುಕುನೋಟ

"ಪ್ರಖ್ಯಾತಿ" ಮತ್ತು "ಐಶ್ವರ್ಯ" ಮಾನವನ ಎರಡು ಮಹಾ ಅನ್ವೇಷಣೆಯಾಗಿದೆ. ಇತಿಹಾಸದ ಪುಟಗಳಲ್ಲಿ ಕ್ಷಣಿಕವಾದರೂ ಸರಿಯೇ ಅಲ್ಪ ಮನ್ನಣೆಗಾಗಿ ಜೀವನ ವ್ಯರ್ಥ ವಾಗಿ ಕಳೆದುಹೋಗಿದೆ.

ಡೈಯೋಜೆನೆಸ್‌ನ ಉತ್ತರದಿಂದ ಪ್ರಭಾವಿತನಾದ ಮಹಾ ಅಲೆಕ್ಸಾಂಡ್ರನು, ಅವನಿಗೆ ಏನನ್ನೂ ಬೇಕಾದರೂ ಬೇಡಿಕೊಳ್ಳಲು ಹೇಳಿದ್ದು ಮಾತ್ರವಲ್ಲ ಅದು ಅವನಿಗೆ ದೊರಕುವದೆಂದು ತಿಳಿಸಿದನು. ಆ ತತ್ವಜ್ಞಾನಿಯು ಅಮರತ್ವದಲ್ಲಿ ಅಲ್ಪ ಭಾಗವನ್ನು ಕೇಳಿದ. "ಅದು ನಾನು ಕೊಡಲಾಗದ ಬಹುಮಾನ," ಎಂದು ಅಲೆಕ್ಸಾಂಡ್ರನು ಹೇಳಿ ದನು. ಆಗ ಡೈಯೋಜೆನೆಸ್‌ನು ಹೀಗೆ ಕೇಳಿದನು, "ಹಾಗಾದರೆ, ಒಂದು ಕ್ಷಣವೂ ಆನಂದಿಸುವ ಭರವಸೆಯಿಲ್ಲದಿರುವಾಗ ಅಲೆಕ್ಸಾಂಡ್ರನು ಜಗತ್ತನ್ನು ಜಯಿಸಲು ಯಾಕೆ ಅಷ್ಟು ತೊಂದರೆ ತೆಗೆದುಕೊಳ್ಳಬೇಕಿತ್ತು?" ಮಹಾ ಅಲೆಕ್ಸಾಂಡ್ರನು ತನ್ನನ್ನು ಎಲ್ಲರೂ ಸ್ಮರಿಸಬೇಕು; ನಿರಂತರ ಪ್ರಖ್ಯಾತಿಯನ್ನು ಆನಂದಿಸಬೇಕು ಎಂದು ಬಯಸಿದನು. ಇಂದು ಅನೇಕರು ಆ ಬಯಕೆಯನ್ನು ಹಂಚಿಕೊಳ್ಳುತ್ತಾರೆ.

ಇಷಯನ ಮಗನಾದ ದಾವೀದನು, ನಿರಂತರ ಪ್ರಖ್ಯಾತಿಯನ್ನು ಆನಂದಿಸಿದನು. ಜಗತ್ತು ಇಷ್ಟಪಡುವ ಅನೇಕ ಗುಣಗಳ ಮೇಲೆ ಅವನ ಪ್ರಖ್ಯಾತಿಯು ನೆಲೆಸಬಹುದಿತ್ತು. ಆದರೆ ಒಂದು ಗುಣವು ದಾವೀದನಿಗೆ ಪ್ರಖ್ಯಾತಿ ಮತ್ತು ಅದೃಷ್ಟಯೋಗವನ್ನು ಖಚಿತವಾಗಿ ದೊರಕುವಂತೆ ಮಾಡಿತು. ದಾವೀದನು ನಿರಂತರ ಪ್ರಖ್ಯಾತಿಯನ್ನು ಅನುಭವಿಸಿದನು ಕಾರಣ ಅವನಲ್ಲಿ ದೈವ ಭಕ್ತಿಯ ಹೃದಯವಿತ್ತು! "ದೇವರ ಹೃದಯಕ್ಕೆ ಒಪ್ಪುವ ಮನುಷ್ಯ" ಎಂಬ ಬಿರುದು ದಾವೀ ದನಿಗಿತ್ತು ಎಂದು 1 ಸಮುವೇಲ 13:14 ಹೇಳುತ್ತದೆ.

ಯೌವನಸ್ಥ ಕುರಿ ಕಾಯುವ ಹುಡುಗನನ್ನು ಶ್ರೇಷ್ಠ ಜನರ ಗುಂಪಿಗೆ ಸೇರಿ ಸಿದ, ದಾವೀ ದನ ದೈವ ಭಕ್ತ ಹೃದಯವನ್ನು ಸ್ವಲ್ಪ ಗಮನಿಸಬೇಕು. 13:14ರ ಮಾತುಗಳು ದಾವೀದನು ಇನ್ನೂ ಚಿಕ್ಕವನಾಗಿರುವಾಗ ಆಡಿದ ಮಾತುಗಳು. ಅವನು ಇಪ್ಪತ್ತೂರರಿಂದ ಮೂವತ್ತು ವರ್ಷಗಳ ಪ್ರಾಯದಲ್ಲಿ ಆಳತೊಡಗಿದನು; ಆದುದರಿಂದ ಈ ಹೇಳಿಕೆಯು ಸೌಲನ ಆಳ್ವಿಕೆಯು ಮುಕ್ತಾಯಗೊಳ್ಳುವ ಸುಮಾರು ಹತ್ತರಿಂದ ಹದಿನೈದು ವರ್ಷ ಮೊದಲೇ ಹೇಳಲ್ಪಟ್ಟಿತ್ತು. ಈ ಮಾತುಗಳು ಇಲ್ಲಿ ಮತ್ತು ಅಪೊಸ್ತಲರ ಕೃತ್ಯಗಳು 13:22ರಲ್ಲಿದೆ. ಸಮುವೇಲನು ನುಡಿದ ಈ ಮಾತುಗಳು, ಓದುಗರಿಗೆ ಸೌಲನ ಗುಣದೊಂದಿಗೆ ವ್ಯತ್ಯಾಸವನ್ನು ತೋರಿಸುತ್ತದೆ. ದಾವೀದನು ಪರಿಪೂರ್ಣನಾಗಿರದಿದ್ದರೂ, ಅದರಲ್ಲೂ ತನ್ನ ಮಧ್ಯವಯಸ್ಸಿನಲ್ಲಿ, ದೇವರನ್ನು ಹುಡುಕುವ ಭಾವನೆ ಅವನಲ್ಲಿ ಇನ್ನೂ ಇತ್ತು. ಈ "ಹೃದಯವು" ನಮ್ಮ ಲಕ್ಷ್ಯವನ್ನು ಸೆಳೆ ಯುತ್ತದೆ. ಅದು ಅಮೂಲ್ಯ ಗುಣಗಳನ್ನು ಮನೆ ಮಾಡಿತ್ತು.

### ಒಂದು ದೈವ ಭಕ್ತ ಹೃದಯದ ರಾಜತ್ವ

*ದಾವೀದನು ತುಳಿತಕ್ಕೊಳಗಾದವರ ಕುರಿತು ಕಳಕಳಿಯುಳ್ಳವನಾಗಿದ್ದನು (23:5).* ಸೌಲನ ಹೊಟ್ಟೆ ಕಿಚ್ಚು ದಾವೀದನನ್ನು ಒಂದು ಪಲಾಯನದ ಜೀವಿತಕ್ಕೆ ನಡೆಸಿತ್ತು.

“ತಪ್ಪಿಸಿಕೊಂಡು ಓಡುವ” ಸಮಯದಲ್ಲಿ ದಾವೀದನು ಒಂದು ಸೇನೆಯನ್ನು ಒಟ್ಟುಗೂಡಿಸಿ ಸ್ವತಂತ್ರವಾಗಿ ನ್ಯಾಯವನ್ನು ದೊರಕಿಸುತ್ತಿದ್ದನು. ಫಿಲಿಷ್ಟಿಯರಿಂದ ಹಿಂಸೆಗೆ ಒಳಗಾದ ಒಂದು ಇಸ್ರಾಯೇಲಿ ಪಟ್ಟಣದ ಕುರಿತು ಅವನು ಕೇಳಿದನು. 1 ಸಮುವೇಲ 23 ಸೌಲನು ಅವನನ್ನು ಬಿಟ್ಟು ಬಿಡದೇ ಬೆನ್ನಟ್ಟಿದ್ದರೂ, ಈ ಜನರಿಗೆ ಸಹಾಯ ಮಾಡಲು ದಾವೀದನು ಆಸಕ್ತಿ ವಹಿಸಿದನು.

ಇದು ಒಂದು ಗೌರವಾನಿತ್ವ ಕಾರ್ಯವಾಗಿತ್ತು. ದಾವೀದನು ಒಂದು ವೇಳೆ ಇತರ ಮನುಷ್ಯರಂತೆ ಇದ್ದರೆ, ಪ್ರತಿಕಾರವನ್ನು ಹಾರೈಸಿ, ಸೌಲನು ಒಬ್ಬ ಷಂಡ ಅರಸನೆಂದು ತೋರಿ ಬರುವ, ಈ ದಾಳಿಯಿಂದ ಸಂತೋಷ ಪಡುತ್ತಿದ್ದನು. ಆದರೆ ತುಳಿತಕ್ಕೊಳ ಗಾದವರ ವಿಷಯದಲ್ಲಿ ದಾವೀದನಿಗೆ ಕಳಕಳಿಯಿದದ್ದರಿಂದ ಅವರ ಸಹಾಯಕ್ಕೆ ಅವನು ತ್ವರೆಪಟ್ಟನು. ದೈವಭಕ್ತ ಹೃದಯವು ಸ್ವಂತ ವಿಷಯವನ್ನು ಲಕ್ಷ್ಯೀಕರಿಸದೇ, ಇತರರ ಸೇವೆ ಮಾಡಲು ಅರಸುತ್ತದೆ (cf. ಫಿಲಿಪ್ಪಿ 2:3, 4; 1 ಕೊರಿಂಥ 10:24; 12:25-27). ತುಳಿತಕ್ಕೊಳಗಾದವರ ಕುರಿತು ಕಳಕಳಿಯು ದೇವರ ಹೃದಯದಿಂದ ಉತ್ಪತ್ತಿಯಾಗುತ್ತದೆ (ಕೀರ್ತನೆ 86:5, 13, 15, 16; ಯಾಕೋಬ 5:11).

*ವೈರಿಗಳ ವಿಷಯದಲ್ಲಿ ದಾವೀದನು ಕರುಣೆಯುಳ್ಳವನಾಗಿದ್ದನು (24:5, 10, 19).* ಸೌಲನ ಪ್ರಾಣವು ಅವನ ಕೈಯಲ್ಲಿತ್ತು. ಕೇವಲ ಒಂದು ಮಾತು ಹೇಳಿದ ರೆಸಾಕು ಸೌಲನು ಕೊಲ್ಲಲ್ಪಡುತ್ತಿದ್ದನು. ಆದರೆ ದಾವೀದನು ಅದನ್ನು ನಿರಾಕರಿಸಿದನು. ಯಾಕೆಂದರೆ, ತನ್ನ ಅತಿ ವೈರಿಗೂ ಸಹ ಕರುಣೆ ತೋರಿಸಲು ನಿರ್ಧರಿಸಿದನು!

ಕರುಣೆಗಿಂತ ಹೆಚ್ಚಿನ ಬೇರೆ ಯಾವ ಗುಣ ದೇವರ ಹೃದಯಲ್ಲಿದೆ? (ಹೋಲಿಸು ತೀತ 3:3-7; ಎಫೆಸ 2:4, 5.) ಕರುಣೆಯ ಮೇಲೆ ನಾವು ಕೇಂದ್ರೀಕರಿಸಿ, ನಮ್ಮ ಹೃದಯದಲ್ಲಿ ಅದಕ್ಕೆ ಸ್ಥಳ ಮಾಡುವದು ಸೂಕ್ತ. ಕೋಪಕ್ಕೆ ಒಳಗಾಗುತ್ತಿದ್ದ ಒಬ್ಬ ರಾಜ ಪುತ್ರನ ಕುರಿತು ಒಂದು ಹಳೇ ಕತೆಯಿದೆ. ಅದನ್ನು ಗುಣ ಪಡಿಸುವದಕ್ಕಾಗಿ ಅವನು ಕ್ರಿಸ್ತನ ಕುರಿತು ಅಭ್ಯಾಸ ಮಾಡುತ್ತಿದ್ದನು. ಬಾಧೆಗಳ ಮಧ್ಯದಲ್ಲಿ ನಮ್ಮ ಕರ್ತನ ತಾಳ್ಮೆ ಮತ್ತು ಆತನು ಎದುರಿಸಿದ ಅವಮಾನ, ಈ ರಾಜಪುತ್ರನಿಗೆ ಆಲೋಚಿಸುವಂತೆ ಮಾಡಿತ್ತು. ಪ್ರತಿ ಬಾರಿ ಕೋಪದ ಶೋಧನೆಗೆ ಒಳಗಾಗುವ ಸಂದರ್ಭದಲ್ಲಿ, ಅವನು ಕ್ರಿಸ್ತನ ಕುರಿತು ಧ್ಯಾನಿಸುತ್ತಿದ್ದನು. ಸ್ವಲ್ಪ ಸಮಯದಲ್ಲಿಯೇ ಕ್ರಿಸ್ತನ ಕರುಣೆಯುಳ್ಳ ಹೃದಯದಂತೆ ಅವನ ಹೃದಯವೂ ಮಾರ್ಪಟ್ಟಿತು!

*ತನಗೆ ತಪ್ಪು ಮಾಡಿದವರ ಕುರಿತು ದಾವೀದನು ನ್ಯಾಯಸಮ್ಮತನಾಗಿದ್ದನು (25:23ff.).* ಅವನ ಮೃದು ಹೃದಯ ನಿಮಿತ್ತ ದಾವೀದನು ಅಬಿಗೈಲಳಿಂದ ಮನವರಿಸಲ್ಪಟ್ಟನು. ಅವನು ನ್ಯಾಯ ಸಮ್ಮತನಾದ ವ್ಯಕ್ತಿಯಾಗಿದ್ದನು ಮತ್ತು ಭಯಕಂರ ತಪ್ಪುಗಳನ್ನು ದೂರ ಮಾಡಿದನು (ಹೋಲಿಸು 25:32-35).

ನ್ಯಾಯ ಸಮ್ಮತವಾಗಿರುವುದು ನಮ್ಮ ದೇವರನ್ನು ನಿರೂಪಿಸುತ್ತದೆ. ದಂಡಿಸುವದಕ್ಕೆ ತ್ವರೆ ಪಡದೇ, ನಮ್ಮ ದೇವರು ತನ್ನ ನಿರ್ಧಾರಗಳಲ್ಲಿ ನ್ಯಾಯ ಸಮ್ಮತಿಯನ್ನು ವ್ಯಕ್ತಪಡಿಸುತ್ತಾನೆ (ಆದಿಕಾಂಡ 6:3; 1 ಪೇತ್ರ 3:20). ದೇವರು ಸಹಾಯ ಮಾಡಲು ಇಷ್ಟಪಡುವವರಿಂದ ಅನೇ ಕಾವರ್ತಿ ಈ ನ್ಯಾಯ ಸಮ್ಮತಿಯು ಅನ್ಯಾಯಕ್ಕೊಳ ಗಾಗುತ್ತದೆ (ನೆಹೆಮೀಯ 9:28-31). ಈ ಗುಣವಿರುವ ದೈವಭಕ್ತಿಯ ಹೃದಯ ಅನೇಕರಲ್ಲಿ ಇರುವದಿಲ್ಲ. ಇತರರ ಕುರಿತು ತೀರ್ಪು ಮತ್ತು ನ್ಯಾಯ ಕೊಡುವದಕ್ಕೆ ನಾವು ಕಾತುರರಾಗಿರುತ್ತೇವೆ! ಈ ಸ್ವಭಾವವಿರುವ ದೇವರ ಹೃದಯವನ್ನು ನಮ್ಮ ಜೀವನದಲ್ಲಿ ಪೋಷಿಸುವದನ್ನು ನಾವು ಮಾಡತಕ್ಕದ್ದು (ಗಲಾತ್ಯ 5:22; ಎಫೆಸ 4:1, 2).

*ದುಷ್ಟತನದೆಡೆಗೆ ದಾವೀದನು ಬಲ ಮತ್ತು ರೋಷವನ್ನು ತೋರಿಸಿದನು (17:32ff.).* ಗತ್ ಊರಿನ ದೈತ್ಯನು ದಾವೀದನಿಂದ ನಾಶವಾಗುವದಕ್ಕೆ ಕಾರಣ ಅವನಲ್ಲಿ ತಪ್ಪಾದ

ಹೃದಯವಿತ್ತು. ಗೋಲ್ಯಾತನನ್ನು ದಾವೀದನು ಮುಖಾಮುಖಿಯಾಗಿ ಎದುರಿಸಿದನು ಮತ್ತು ತನ್ನ ಬಲವನ್ನು ದೇವರಲ್ಲಿ ಬೇರೂರಿದನು (17:45, 50ಎ). ದೇವರ ಹೃದಯವನ್ನು ಹೊಂದಿದವರು ಅಲ್ಪ ದುಷ್ಟತನವನ್ನೂ ಸಹಿಸಲಾರರು (ನಹೂಮ 1:6). ದೈವಿಕ ಹೃದಯವನ್ನು ಹೊಂದಿದ ಒಬ್ಬ ವಿಶ್ವಾಸಿಯು, ತನ್ನ ಮತ್ತು ಪಾಪದ ಮಧ್ಯೆ ಒಂದು ರೇಖೆಯನ್ನು ಎಳೆಯುತ್ತಾನೆ. ಅದನ್ನು ಅವನು ಎಂದಿಗೂ ದಾಟುವದಿಲ್ಲ ಯಾಕೆಂದರೆ ಹಾಗೆ ಮಾಡುವದರಿಂದ ಅವನು ದುಷ್ಟತನದ ಕುರಿತು ದೇವರಿಗಿರುವ ರೋಷವನ್ನು ಹಂಚಿಕೊಳ್ಳುತ್ತಾನೆ (ಹೋಲಿಸು ರೋಮಾಪುರ 1ಬಿ-2ಎ; ಎಫೆಸ 5:7-11; 1 ಥೆಸಲೋನಿಕ 4:4).

*ದಾವೀದನು* ಕ್ಷಮೆಯನ್ನು *ತೋರ್ಪಡಿಸಿದನು (26:21).* ಸೌಲನನ್ನು ಕೊಲ್ಲಲು ದಾವೀದನಿಗೆ ಎರಡನೇಯ ಅವಕಾಶ ಒದಗಿತ್ತು. ಮೊದಲನೆಯ ಅವಕಾಶದ ನಂತರ ಅನೇಕ ವರ್ಷಗಳು ಗತಿಸಿದ್ದವು (24:2), ಆದರೆ ಸೌಲನ ವಾಗ್ದಾನ ಉಳಿಯಲಿಲ್ಲ. ತನ್ನ ತಲೆಯ ಮೇಲೆ ಬೆಲೆಯನ್ನು ಇಟ್ಟುಕೊಂಡ ವ್ಯಕ್ತಿ ದಾವೀದನಾಗಿದ್ದನು ಮತ್ತು ಸೌಲನು ಅದಕ್ಕೆ ಜವಾಬ್ದಾರನಾಗಿದ್ದನು! 26:21ರಲ್ಲಿರುವ ಸೌಲನ ತಪ್ಪೊಪ್ಪಿಗೆಯನ್ನು ಕುರಿತು ದಾವೀದನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಯಾಕೆಂದರೆ, ಸೌಲನು ಅವನನ್ನು ಹಿಂತಿರುಗಿ ಬರಲು ಆಹ್ವಾನಿಸಿದರೂ, ಅವನು ತನ್ನ ದಾರಿ ಹಿಡಿದು ಹೋದನು.

ಕ್ಷಮೆಯು ಯಾವಾಗಲೂ ದೊರೆಯುವ ಹೃದಯವನ್ನು ನಾವು ಬೆಳೆಸಿಕೊಳ್ಳಬೇಕು (ಮತ್ತಾಯ 18:35; 6:12; ಕೊಲೆಸ್ಸೆ 3:13). ನಮ್ಮ ಹೃದಯವು ದೇವರ ಹೃದಯದಂತಿರಬೇಕು, ಪ್ರೀತಿ ಮತ್ತು ಕ್ಷಮೆಯಿಂದ ತುಂಬಿತುಳುಕುವಂತೆ (ಹೋಶೇಯನು 6:1, 2; ಯೋನನು 4:2).

*ಅಧಿಕಾರಕ್ಕೆ ಗೌರವ ಕೊಡುವ ವ್ಯಕ್ತಿ ದಾವೀದನಾಗಿದ್ದನು (29:9, 10).* ಸೌಲನು ಮರಣಕ್ಕೆ ಪಾತ್ರನಾಗಿದ್ದರೂ, ದಾವೀದನು ದೇವರಿಂದಲೇ ದೊರಕುವ ಅಧಿಕಾರಕ್ಕೆ ಮಾನ ಕೊಟ್ಟನು. ತನ್ನ ಎಲ್ಲಾ ನಡವಳಿಕೆಯಲ್ಲಿ, ಸೌಲನೇ ಇಸ್ರಾಯೇಲಿನ ಅರಸನೆಂದು ದಾವೀದನು ಒಪ್ಪಿಕೊಂಡನು. ದೇವರ ನಿಯಮಗಳನ್ನು ದಾವೀದನು ಎಂದಿಗೂ ಬದಲು ಮಾಡಲಿಲ್ಲ, ಮತ್ತು ಅವನ ನಡವಳಿಕೆಯು ದೇವರ ಚಿತ್ತವನ್ನು ನೆರವೇರಿಸಿತು.

ದೈವಿಕ ಹೃದಯವು ದೇವರ ನಿಯಮವನ್ನು ಅನುಸರಿಸಲು ಯಾವಾಗಲೂ ಬಯಸುತ್ತದೆ. ದೈವಿಕ ಹೃದಯವು ದೇವರ ನಿಯಮಕ್ಕೆ ಬದ್ಧವಾಗುತ್ತದೆ, ಅದರಲ್ಲಿ ಬದಲಾವಣೆಯನ್ನು ಅಪೇಕ್ಷಿಸುವದಿಲ್ಲ ಮತ್ತು ಅವುಗಳನ್ನು ತಿರಸ್ಕರಿಸುವದಿಲ್ಲ (ಎಜ್ರ 7:10).

ಒಬ್ಬರು ಹೀಗೆ ನುಡಿದಿದ್ದಾರೆ, "ಮನುಷ್ಯನ ಹೃದಯವು ಸದಾ ಉರಿಯುವ ಆವಿಗೆಯಾಗಿದೆ. ದೇವರ ಪ್ರೀತಿಯಿಂದ ಅದನ್ನು ಪೋಷಿಸುವದಾದರೆ, ದೇವರೆಡೆಗೆ ಮತ್ತು ಮನುಷ್ಯನೆಡೆಗೆ ಪ್ರೀತಿಯಿರುವ ಪ್ರಜ್ವಲವಾದ ಬೆಂಕಿ ಅಲ್ಲಿ ಹುಟ್ಟುತ್ತದೆ. ಆದರೆ ಅದನ್ನು ಸ್ವ-ಪ್ರೀತಿಯ ಆಲೋಚನೆಗಳಿಂದ ಸಲುಹುವದಾದರೆ ಅದು ಕೆಟ್ಟ ಹೊಗೆ, ದುರ್ವಾಸನೆ ಮತ್ತು ಕತ್ತಲಿನಿಂದ ತುಂಬಿಕೊಳ್ಳುತ್ತದೆ."

## ದೈವ ಭಕ್ತ ಹೃದಯದ ಪರಿಣಾಮ

ಒಬ್ಬ ವ್ಯಕ್ತಿಯ ಹೃದಯವು ಈಗಾಗಲೇ ಪಟ್ಟಿ ಮಾಡಿದ ಗುಣಗಳಿಂದ ರೂಪಿಸಿಕೊಳ್ಳುವದಾದರೆ, ಅವನ ಜೀವನವು ಕೆಳಗೆ ನಮೂದಿಸಿದ ಪರಿಣಾಮಗಳಿಂದ ಆಶೀರ್ವದಿಸಲ್ಪಡುತ್ತದೆ.

*ದೇವರ ಶಕ್ತಿಯ ಮೇಲೆ ಅವನಿಗೆ ನಂಬಿಕೆ ಮತ್ತು ಭರವಸೆ ಇರುತ್ತದೆ.* ಸೌಲನಿಗೆ ತನ್ನ ಬಲದ ಕುರಿತು ಹೆಚ್ಚಳವಿತ್ತು. ಅದರ ಪರಿಣಾಮವಾಗಿ ಅವನು ವಿಫಲನಾದನು. ದಾವೀದನು ಎಲ್ಲವುಗಳಿಗಾಗಿ ದೇವರನ್ನು ನಂಬಿದನು ಮತ್ತು ಅವನು ಯಶಸ್ವಿಯಾದನು (17:5-47; ಕೀರ್ತನೆ 115:3; 135:6).

ಎಡ್ವರ್ಡ್ I (1239-1307), ಇಂಗ್ಲಾಂಡಿನ ಅರಸನು, ಪರಿಶುದ್ಧ ಸ್ಥಳಗಳಿಗೆ ಹೋಗಲು ಬಹು ಆಕಾಂಕ್ಷೆ ಪಟ್ಟನು. ಆದರೆ ಸ್ವದೇಶದಲ್ಲಿನ ಯುದ್ಧವು ಅಡ್ಡಿ ಮಾಡಿತು. ಮರಣದ ನಂತರ ತಂದೆಯ ಹೃದಯವನ್ನು ಅಲ್ಲಿಗೆ ಕೊಂಡೊಯ್ಯಬೇಕೆಂದು ತನ್ನ ಮಗನಿಗೆ ಆಜ್ಞಾಪಿಸಿದನು. ಆ ಉದ್ದೇಶಕ್ಕಾಗಿ ಎಡ್ವರ್ಡ್ 32,000 ಪೌಂಡ್‌ಗಳನ್ನು ಅದರ ಖರ್ಚುವೆಚ್ಚಕ್ಕಾಗಿ ಬದಿಗಿರಿಸಿದನು, ಮತ್ತು 140 ಯೋಧರಿಗೆ ಅಲ್ಲಿ ಹಾಜರಿದ್ದು ಸೇವೆ ಮಾಡಲು ಆಜ್ಞಾಪಿಸಿದನು. ಅದೇ ರೀತಿಯಾಗಿ, ತಮ್ಮ ನಿತ್ಯ ನಿವಾಸವನ್ನು ಇನ್ನೂ ತಲುಪದಿದ್ದರೂ, ಕ್ರೈಸ್ತರ ದೈವ ಭಕ್ತ ಹೃದಯಗಳು ಪರಲೋಕದಲ್ಲಿವೆ.

*ದಾವೀದನಿಗೆ ಕ್ಷಮೆಯು ದೊರಕಿತು.* ಸೌಲನನ್ನು ಸಮುವೇಲನು ಎದುರಿಸಿದಾಗ, ಅರಸನು ನಡುಗಲಿಲ್ಲ. ಸೌಲ ಪಾಪದ ಅರಿಕೆಯು ಯಥಾರ್ಥವಾಗಿರಲಿಲ್ಲ. ನಾತಾನಯೇಲನಿಂದ ದಾವೀದನು ಎದುರಿಸಲ್ಪಟ್ಟಾಗ ಅದು ಎಷ್ಟೊಂದು ಬೇರೆಯಾಗಿತ್ತು! ಕೀರ್ತನೆ 51 ತೋರ್ಪಡಿಸುವ ಮಾತುಗಳಲ್ಲಿ ಕಂಡು ಬಂದ ದುಃಖವು ಇನ್ನೆಲ್ಲಿಯೂ ಕಂಡು ಬರುವದಿಲ್ಲ.

"ದೇವರ ಹೃದಯಕ್ಕೆ ಒಪ್ಪುವ" ಮನುಷ್ಯರೆಲ್ಲರೂ, ಪಾಪದಲ್ಲಿ ಬೀಳುವದರ ದುಃಖವನ್ನೂ ಮತ್ತು ಸಮೃದ್ಧವಾಗಿ ದೊರೆಯುವ ದೇವರ ಕ್ಷಮೆಯನ್ನೂ ಆನಂದಿಸ ಬಲ್ಲರು (ಕೀರ್ತನೆ 38:3, 18; 1 ಯೋಹಾನ 1:7, 9; ಇಬ್ರಿಯ 8:12).

*ಭಕ್ತಿ ಮತ್ತು ದೇವರಿಗೆ ನಿಷ್ಠೆಯಿಂದಿರುವ ಪರಂಪರೆಯನ್ನು ದಾವೀದನು ಬಿಟ್ಟು ಹೋದನು.* ಅವನು ಮರಣ ಹೊಂದಿ ಅನೇಕ ಶತಮಾನಗಳು ಗತಿಸಿದರೂ, ದಾವೀದನು ತನ್ನ ದೈವಿಕ ಹೃದಯಕ್ಕೆ ಹೆಸರಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 13:22). ಹೇಬೇಲನಂತೆ, ದೈವಿಕ ಹೃದಯವುಳ್ಳವರು ನಿರಂತರಕ್ಕೂ ಮಾತಾಡುತ್ತಾರೆ (ಇಬ್ರಿಯ 11:4ಬಿ).

## ಮುಕ್ತಾಯ

ದಾವೀದನು ತೋರ್ಪಡಿಸಿದ ದೈವ ಭಕ್ತಿಯ ಗುಣಗಳು ನಮ್ಮ ಮಹಾ ದೇವರಲ್ಲಿ ತೋರಿಬರುತ್ತವೆ: ತುಳಿತಕ್ಕೊಳಗಾದವರ ಕುರಿತು ಆತನಿಗೆ ಕಳಕಳೀಯಿದೆ; ಆತನ ಕರುಣೆ ಎಲ್ಲಾ ಮನುಷ್ಯರಿಗೆ ದೊರೆಯುತ್ತದೆ; ದುಷ್ಟತನದ ವಿಷಯದಲ್ಲಿ ಆತನಿಗೆ ರೋಷವಿದೆ ಮತ್ತು ಅದನ್ನು ಸಹಿಸುವದಿಲ್ಲ; ಆತನು ನ್ಯಾಯ ಸಮ್ಮತನೂ ಮತ್ತು ದೀರ್ಘ ಶಾಂತನೂ ಆಗಿದ್ದಾನೆ; ಸರ್ವಪಾಪವನ್ನೂ ಅಳಿಸಿಬಿಡುವ ತಕ್ಷಣದ ಕ್ಷಮಾಪಣೆ ಅವನಲ್ಲಿದೆ; ಆತನಲ್ಲಿ ಅಧಿಕಾರವಿದೆ ಮತ್ತು ಕೊನೆಯ ದಿನದಲ್ಲಿ ನಮ್ಮನ್ನು ತೀರ್ಪಿಗೊಳಪಡಿಸುತ್ತಾನೆ.

ಒಬ್ಬ ವ್ಯಕ್ತಿಯನ್ನು ತಪ್ಪದಂತೆ ಇಡುವದಕ್ಕೆ ಯಾವುದು ಅವಶ್ಯವೆಂದು ಆಲೋಚಿಸುವಂತೆ, ಯೆಹೂದ್ಯರ ಒಬ್ಬ ಮಹಾ ಬೋಧಕ ತನ್ನ ಶಿಷ್ಯರನ್ನು ಪ್ರಶ್ನಿಸಿದನು. ಒಳ್ಳೆಯ ದೃಷ್ಟಿಗಿಂತ ಬೇರೆಯಾವುದೂ ಉತ್ತಮವಲ್ಲವೆಂದು ಒಬ್ಬನು ಹೇಳಿದನು. ಇನ್ನೊಬ್ಬನು, ಒಳ್ಳೆಯ ಸಂಗಾತಿ ಎಂದನು. ಮೂರನೇಯವನು, ಒಳ್ಳೆಯ ನೆರೆಯವನು, ಮತ್ತು ನಾಲ್ಕನೇಯವನು ಜ್ಞಾನವೆಂದು ಸೂಚಿಸಿದನು. ಕೊನೆಯಲ್ಲಿ ಒಬ್ಬನು ಬಂದು ಒಳ್ಳೆಯ ಹೃದಯವು ಎಲ್ಲಕ್ಕಿಂತಲೂ ಉತ್ತಮವೆಂದನು. "ನಿಜ" ಎಂದು ಗುರು ನುಡಿದನು, "ಉಳಿದ ಎಲ್ಲರೂ ಹೇಳಿದ ವಿಷಯಗಳನ್ನು ನೀನು ಎರಡು ಮಾತುಗಳಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಿ. ಒಳ್ಳೆಯ ಹೃದಯವಿರುವವನು ಸಂತೃಪ್ತನಾಗಿರುತ್ತಾನೆ, ಒಳ್ಳೆ ಸಂಗಾತಿಯಾಗಿರುತ್ತಾನೆ, ಒಳ್ಳೆಯ ನೆರೆಯವನಾಗಿರುತ್ತಾನೆ; ಮತ್ತು ತನ್ನಿಂದ ಏನು ಒಳ್ಳೆ ಯದು ಮಾಡಬಹುದೆಂದು ಸರಳವಾಗಿ ಗುರುತಿಸುತ್ತಾನೆ." ಇದು ಇಷಯನ ಮಗನಾದ ದಾವೀದನ ಜೀವನದ ಪಾಠವಾಗಿದೆ: ದೈವ ಭಕ್ತಿಯ ಹೃದಯವನ್ನು ಬೆಳೆ ಸಿಕೊಳ್ಳಿರಿ!